ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1908—09ನೆ ಇಸವಿ ಮಿ|| ಅರ್ಜಿ ನಂಬರ್ 723.

ಆನೇಕಲ್ ತಾಲ್ಲೂಕು ಇಂಡ್ಲ ಬೆಲೆಯಲ್ಲಿದ್ದು ಫವತಿಪಟ್ಟ ಮುನಿಯಮ್ಮನ ಆಸ್ತಿ ವಿಷಯದಲ್ಲಿ—

ಅರ್ಜಿದಾರರು ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ನಂಜಾಪುರದಲ್ಲಿರುವ ಇಂಡ್ಲ ಬೆಲೆ ಮುನಿಯಮ್ಮನ ಮಗಳು ಕೆಂಪಕ್ಕ, ಮೃತಪಟ್ಟ ಸದರೀ ಮುನಿಯಮ್ಮನಿಗೆ ಖಾವಂ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಇಂಡ್ಲ ಬೆಲೆ ಸ್ಥಳದ ಪಾಸಸ್ದರಾಗಿ ಮೃತಪಟ್ಟ ಮುನಿಯಮ್ಮನ ಜೆಂದಗಿ ಖಗ್ಯಾಗಿ ಬರತಕ್ಕ 10) ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಖಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪಕ್ಕನ ಅರ್ಜಿಯನ್ನು ಸ್ಯ 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿಯಮ್ಮನ ಆಸ್ತಿಗೆ ಹಕ್ಕುದಾರರಾದ ವಿಪಕ್ಷರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ಫೆಬ್ರವರಿ 16ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮ್ಮಯ್ಯರ್,
ಸಬ್ ಜಡ್ಜ್.